ಶ್ರೀ ಕೆ. ಹೆಚ್. ರಂಗನಾಥ್ : ನನಗೆ ಭವನ ಕಟ್ಟಿಸುವ ಕೆಲಸ ಅಷ್ಟೆ ಇರುವುದು. ಬಾಕಿದೆಲ್ಲಾ ನನಗೆ ಸಂಬಂಧಪಟ್ಟಿದ್ದು ಅಲ್ಲ.

ಶ್ರೀ ಬಾಬುರಾವ್ ಚವಾಣ್ : ಈ ಪ್ರಶ್ನೆಯನ್ನು ಹೋದ ಸಲ ನಾವು ಸನ್ಮಾನ್ಯ ಸಭಾದ್ಯಕ್ಷರಿಗೆ ಕೇಳಿದ್ದೆವು. ಅಂಬೇಡ್ಕರ್ ಭವನದ ಬಗ್ಗೆ ಬಹಳ ಡಿಲೆ ಆಗುತ್ತಾ ಇದೆ. ಅದಕ್ಕೆ ಮಾನ್ಯ ಮಂತ್ರಿಗಳನ್ನು ನಾನು ಕೇಳುತ್ತಾ ಇದ್ದೇನೆ. ಅದಕ್ಕೆ ತೀವ್ರ ಗತಿಯಿಂದ ಕೆಲಸ ಮಾಡಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಇದು ತೀವ್ರಗತಿಯಲ್ಲೇ ನಡೆಯುತ್ತಾ ಇದೆ. ತೀವ್ರಗತಿಯಲ್ಲೇ ಪ್ರಾರಂಭ ಆಗುತ್ತಾ ಇದೆ. ಈ ವರ್ಷ ಒಂದು ಕೋಟಿ 50 ಲಕ್ಷ ಹಣವನ್ನು ಇದಕ್ಕೆ ಒದಗಿಸಲಾಗಿದೆ.

ಎನ್.ಆರ್.ಡಬ್ಲ್ಯೂ. ಯೋಜನೆ

517 - ಶ್ರೀ ಪಿ. ಸಿ ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಎನ್.ಆರ್.ಡಬ್ಲ್ಯೂ. ಯೋಜನೆಯನ್ನು 1971ನೇ ಜನಗಣತಿಯ ಆಧಾರದ ಮೇಲೆ ಮಾಡಲಾದ ಸಂಗತಿ ನಿಜವೇ?*

ಆ) *ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ*

ಇ) *ಈಗ 1991-92ನೇ ಸಾಲಿನ ಜನಗಣತಿಯ ಆಧಾರದ ಮೇಲೆ ಯೋಜನೆ ಹಮ್ಮಿಕೊಳ್ಳುವ ವಿಚಾರ ಇದೆಯೇ?*

ಈ) *ಹಾಗಿದ್ದಲ್ಲಿ ಈ ಯೋಜನೆಯನ್ನು ತಯಾರಿಸುವಾಗ ಮುಂದಿನ 2000 ಇಸವಿಯನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲಾಗುವುದೇ?*

ಉ) *ಈ ಯೋಜನೆಯ ಉಸ್ತುವಾರಿಯನ್ನು ಜಿಲ್ಲಾ ಪರಿಷತ್ತುಗಳಿಗೆ ವಹಿಸಿಕೊಡುವ ಸಂಭವ ಇದೆಯೇ?*

ಊ) *ಧಾರವಾಡ ಜಿಲ್ಲೆಯಲ್ಲಿನ ವಿಸ್ತರಣೆಯಾದ ಪ್ರದೇಶಗಳಿಗೆ ಈ ಯೋಜನೆಯಡಿ ಮತ್ತೊಂದು ಟ್ಯಾಂಕ್ ಕಟ್ಟಿ ನೀರು ಸರಬರಾಜು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?*

ಋ) *ಹಾಗಿದ್ದಲ್ಲಿ, ಇದನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು ಮತ್ತು ಯೋಜನೆಯನ್ನು ಜಿಲ್ಲಾ ಪರಿಷತ್ತು ವಹಿಸಿಕೊಳ್ಳುವುದೇ?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 1981ರ ಇಸವಿಯಂದು ಮೊದಲು ಕೈಗೊಂಡ ಯೋಜನೆಗಳನ್ನು 1971ರ ಜನಗಣತಿಯ ಆಧಾರದಮೇಲೆ ತಯಾರಿಸಲಾಗಿತ್ತು, ಆದರೆ ಈಗ ತಯಾರಿಸಲಾಗುವ ಯೋಜನೆಗಳನ್ನು 1981ನೇ ಇಸವಿ ಜನಗಣತಿಯನ್ನು ಆಧರಿಸಿ ತಯಾರಿಸಲಾಗುತ್ತಿದೆ. ಇನ್ನು ಮುಂದೆ 1991ನೇ ಇಸವಿ ಜನಗಣತಿಯ ವಿವರಗಳು ಪ್ರಕಟಣೆ ಆದ ಮೇಲೆ, ಅದರ ಆಧಾರದ ಮೇಲೆ ತಯಾರಿಸಲಾಗುವುದು.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಹೌದು. ಮೇಲೆ ವಿವರಿಸಿದ ರೀತಿಯಲ್ಲಿ.

ಈ) ಇಲ್ಲ. 2001ನೇ ಇಸವಿಗೆ ಅಂದಾಜು ಮಾಡಿದ ಜನಸಂಖ್ಯೆಯನ್ನು ಪರಿಗಣಿಸಲಾಗುತ್ತದೆ.

ಉ) ಪ್ರಸ್ತುತ ಈ ಯೋಜನೆಗಳ ಉಸ್ತುವಾರಿಯನ್ನು ಮಂಡಲ ಪಂಚಾಯಿತಿಗಳಿಗೆ ವಹಿಸಲಾಗುತ್ತಿದೆ. ಮುಂದೆ ಈ ಕಾರ್ಯನೀತಿಯ ಬದಲಾವಣೆಯ ಸಾಧ್ಯತೆ ಯಾವಾಗಲೂ ಇರುತ್ತದೆ.

ಊ) ಸುಧಾರಣೆ ಯೋಜನೆಗಳನ್ನು ಯಾವಾಗ ಅಥವಾ ಎಲ್ಲಿ ಬೇಕಾಗುತ್ತದೆಯೋ ಅಲ್ಲಿ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷಣೆಯವರೇ, ನನ್ನ ಮೊದಲನೆಯ ಪ್ರಶ್ನೆಗೆ ಸೆನ್ಸಸ್ ಪ್ರಕಾರ ಎನ್‌ಆರ್‌ಡಬ್ಲ್ಯೂ ಯೋಜನೆಯಲ್ಲಿ ಕುಡಿಯುವ ನೀರಿನ ಯೋಜನೆ ಮಾಡಿರಿ ಎಂದು ಕೇಳಿದ್ದೆ. ಸರ್ಕಾದವರು 1991ನೇ ಸೆನ್ಸಸ್ ಪ್ರಕಾರ ಇನ್ನು ಬಂದಿಲ್ಲ ಎಂದು ಹೇಳುತ್ತಿದ್ದಾರೆ. ನನಗೆ ತಿಳಿದಮಟ್ಟಿಗೆ ಸೆನ್ಸಸ್ ಈಗಾಗಲೇ ಆಗಿದೆ. ಆಮೇಲೆ ಎರಡನೆಯ ಪ್ರಶ್ನೆಯಲ್ಲಿ ಹೇಳುತ್ತಿದ್ದಾರೆ, ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು. ಪ್ರಶ್ನೆ ಏನೆಂದರೆ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಯೋಜನೆ ಮಾಡಿದರೆ ಇಪ್ಪತ್ತು ವರ್ಷ ಹಿಂದೆ ಸರ್ಕಾರದವರು ಹೋಗುತ್ತಿದ್ದಾರೆ. ಪ್ರೆಸೆಂಟ್ ಪಾಪ್ಯೂಲೇಷನ್ ಏನು ಇದೆ ಅದರ ಆಧಾರ ಇಟ್ಟುಕೊಂಡು ಕುಡಿಯುವ ನೀರಿನ ಯೋಜನೆ ಮಾಡಿರಿ ಎಂದು ಹೇಳುತ್ತಿದ್ದೇನೆ. ಅದನ್ನು ಮಾಡುತ್ತಾರೋ ಇಲ್ಲವೋ ಎನ್ನುವುದು ಎರಡನೆಯ ಪ್ರಶ್ನೆ. ಮೂರನೆಯದು ಟ್ಯಾಂಕ್ ಕಟ್ಟುತ್ತಾ ಇದ್ದಾರ?....

ಶ್ರೀ ಎಂ.ವೈ. ಘೋರ್ಪಡೆ : 1991ರವರೆಗೂ ನಾವು 1971ರ ಸೆನ್ಸಸ್ ಪ್ರಕಾರ ಯೋಜನೆಗಳನ್ನು ಮಾಡುತ್ತಾ ಇದ್ದೇವೆ. ಈಗ ಹೊಸ ಸೆನ್ಸಸ್ ಪ್ರಕಾರ ಮಾಡುತ್ತಾ ಇದ್ದೇವೆ. ಮತ್ತು ಅದರಿಂದ ಅನಾನುಕೂಲತೆ ಆಗಬೇಕಾದದ್ದು ಇಲ್ಲ. ಏಕೆಂದರೆ ಎಲ್ಲೆಲ್ಲಿ ಆಗ್‌ಮೆಂಟೇಷಶನ್ ಬೇಕು ಅದನ್ನು ಮಾಡುವ ಕಾರ್ಯಕ್ರಮ ಸರ್ಕಾರಕ್ಕೆ ಇದೆ. ಮತ್ತೆ ಈ ಪ್ರೊಜೆಕ್ಟೆಡ್ ಪಾಪೂಲೇಷನ್ ಅಂದರೆ 10 ವರ್ಷಕ್ಕೆ ಇಪ್ಪತ್ತು ವರ್ಷಕ್ಕೆ ಜಾಸ್ತಿ ಪಾಪುಲೇಷನ್ ಆಗುತ್ತದೆ ಎಂದು ಇಟ್ಟುಕೊಂಡು ನಾವು ಸ್ಕೀಮ್ಸ್ ಮಾಡುತ್ತಾ ಇದ್ದೇವೆ. ಆದುದರಿಂದ ಯಾವ ಸೆನ್ಸಸ್ ಪ್ರಕಾರ ಮಾಡಿದರೂ ಜನಕ್ಕೆ ತೊಂದರೆ ಆಗಲಿಕ್ಕೆ ಇಲ್ಲ, ಆಗುವ ಅವಶ್ಯಕತೆ ಇಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷಣೆಯವರೆ, ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ. ಆದರೆ ಈ ತರಹ ಈ ಕೊಳವೆ ಬಾವಿ ಮೂಲಕ ನೀರನ್ನು ಸರಬರಾಜು ಮಾಡಬೇಕಾಗಿದ್ದರೆ, ಆ ಗ್ರಾಮದಲ್ಲಿ ಇಂತಿಷ್ಟು ಜನಸಂಖ್ಯೆ ಇರಬೇಕು ಎನ್ನತಕ್ಕಂಥಾದ್ದು ನಿಗದಿ ಇದೆ. ಅದಕ್ಕೆ ಒಂದೂವರೆ ಸಾವಿರವೋ ಅಥವಾ ಒಂದು ಸಾವಿರ ಎಂದು ನಿಗದಿ ಇದೆ. ಅದು ಇಲ್ಲದೆ ಇದ್ದರೆ ಆ ಯೋಜನೆಗಳನ್ನು ಮಂಜೂರು ಮಾಡುತ್ತಾ ಇಲ್ಲ. ಇದರಿಂದ ಏನಾಗುತ್ತಾ ಇದೆ ಎಂದರೆ ಅನೇಕ ಗ್ರಾಮಗಳಲ್ಲಿ ನಿಜವಾಗಿಯೂ ತೊಂದರೆ ಇದ್ದರೂ ಸಹ ಈ ಯೋಜನೆಗಳು ಮಂಜೂರು ಆಗುತ್ತಾ ಇಲ್ಲ. ಅವಶ್ಯಕತೆಯನ್ನು ನೋಡಿ ಈ ಯೋಜನೆಗಳನ್ನು ಮಂಜೂರಾತಿ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಂ.ವೈ. ಘೋರ್ಪಡೆ : ಈಗ ಕರ್ನಾಟಕದಲ್ಲಿ ಸುಮಾರು ಇಪ್ಪತ್ತೈದು ಸಾವಿರ ಗ್ರಾಮಗಳು ಅಲ್ಲದೆ ಈ ಹ್ಯಾಬಿಟೇಷನ್ಸ್ ಇನ್ನು ಇಪ್ಪತ್ತೈದು ಸಾವಿರ ಇದೆ. ಇದಕ್ಕೆ ಒಂದಾದರೂ ಕೊಳವೆ ಬಾವಿಯನ್ನು ಕೊಡುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಮತ್ತೆ ಎಲ್ಲೆಲ್ಲಿ ಬಹಳ ತೊಂದರೆ ಜನಕ್ಕೆ ಆಗುತ್ತಾ ಇದೆ ಅಲ್ಲಿ ನೀರಿನ ವ್ಯವಸ್ಥೆ ಮಾಡಬೇಕಾದದ್ದು ಸರ್ಕಾರದ ಉದ್ದೇಶ. ಅದಕ್ಕೆ ಯಾವ ಒಂದು ರೂಲ್ ಅಡ್ಡ ಬರುವುದಕ್ಕೆ ನಾವು ಬಿಡುವುದಿಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೆ, ನಾನು ಕೇಳಿದ್ದುದು, ಒಂದು ಅವರು ಉತ್ತರ ಹೇಳುವುದು ಮತ್ತೊಂದು ಆಗಿದೆ.

ಉಪಾಧ್ಯಕ್ಷರು : ಈಗ ಶ್ರೀ ಪಿ.ಸಿ. ಸಿದ್ದನಗೌಡರು ಪ್ರಶ್ನೆ ಕೇಳಬೇಕು.

ಶ್ರೀ ಪಿ.ಸಿ. ಸಿದ್ದನಗೌಡರ್ : ಅಧ್ಯಕ್ಷರೆ, ಎನ್‌ಆರ್‌ಡಬ್ಲ್ಯೂ ಯೋಚನೆಯನ್ನು ಇಲಾಖೆಯಿಂದ ಮಾಡಿದರೆ ಬಹಳ ಸೂಕ್ತ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಕಂಟ್ರಾಕ್ಟುದಾರರು ಅರ್ಧ ಕೆಲಸವನ್ನು ಮಾಡಿ ಅನೇಕ ಗ್ರಾಮದಲ್ಲಿ ಬಿಟ್ಟಿದ್ದಾರೆ. ಇದು ಇಲಾಖೆಯಿಂದ ಮಾಡಬೇಕು ಎನ್ನುವುದು ಒಂದು. ಎರಡನೇಯ ಪ್ರಶ್ನೆ ಈ ಜಿಲ್ಲಾ ಪರಿಷತ್ತಿನವರೇ ಎನ್‌ಆರ್‌ಡಬ್ಲ್ಯೂ ಯೋಜನೆಯನ್ನು ಆ ಇಲಾಖೆಯವರೇ ತೆಗೆದುಕೊಳ್ಳಬೇಕು ಎನ್ನುವುದು ನನ್ನ ಎರಡನೇ ಪ್ರಶ್ನೆ. ಈ ಯೋಜನೆಯನ್ನು ಜಿಲ್ಲಾ ಪರಿಷತ್ತಿನವರು ವಹಿಸಿಕೊಳ್ಳಬೇಕು. ಎನ್‌ಆರ್‌ಡಬ್ಲ್ಯೂ ಯೋಜನೆ ಕಂಪ್ಲೀಟ್ ಆದಕೂಡಲೇ ಮಂಡಲ್ ಪಂಚಾಯಿತಿಗೆ ಹ್ಯಾಂಡ್‌ಓವರ್ ಮಾಡುತ್ತಾರೆ.

11.35 ಪಿ.ಎಂ.

ಒಂದು ಮಿಷನ್ ಕೆಟ್ಟರೆ ರಿಪೇರಿ ಮಾಡಿಸಲು 5,000 ರೂಪಾಯಿಗಳು ಯಾವ ಮಂಡಲದಲ್ಲೂ ಇರುವುದಿಲ್ಲ. ಹೀಗೆಯೇ ಅನೇಕ ಗ್ರಾಮಗಳಲ್ಲಿ ತೊಂದರೆಗಳು ಇವೆ. ಇಲಾಖೆಯಿಂದ ಮಾಡಿಸುವ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ?

SRI. M.Y. GHORPADE : The Government is prepared to re-consider and review that arrangement. ಮೇಂಟೆನೆನ್ಸ್‌ನಲ್ಲಿ ತೊಂದರೆ ಆಗಿದ್ದರೆ ಅದನ್ನು ಪೂರ್ಣವಾಗಿ ಪರಿಶೀಲನೆ ಮಾಡೋಣ ಅದೇ ರೀತಿ ಯಾವ ಒಂದು ರೂಲ್ ನಿಂದ ಈ ರೀತಿ ತೊಂದರೆ ಆಗುತ್ತಾ ಇದ್ದರೆ ಆ ರೂಲ್‌ನ್ನು ವೇವ್ ಮಾಡಲು ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಇಲಾಖೆಯಿಂದ ಮಾಡಬೇಕು ಎನ್ನುವುದೇ ನನ್ನ ಪ್ರಶ್ನೆ. ಅರ್ಧ ಕಟ್ಟಿ ಕೆಲವು ಕಡೆ ಹಾಗೆ ನಿಂತಿದೆ. ಆದ್ದರಿಂದ ನಾನು ಈ ಸಲಹೆ ಮಾಡುತ್ತಿದ್ದೇನೆ ಎರಡನೆಯದಾಗಿ ಅವರೇ ವಹಿಸಿಕೊಳ್ಳಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ವಿವರಗಳನ್ನು ಪಂಚಾಯತ್ ರಾಜ್ ಇಲಾಖೆಯಿಂದ ತರಿಸಬೇಕಾಗಿದೆ. ಆದ್ದರಿಂದ ಸ್ವಲ್ಪ ಕಾಲಾವಕಾಶ ಕೇಳಿ ಪತ್ರ ಬರೆದಿದ್ದೇನೆ. ಆದ್ದರಿಂದ ಇದನ್ನು ಹೆಲ್ಡ್‌ಓವರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಣಿಯವರು : ಮಾನ್ಯ ಸಚಿವರು ಸ್ವಲ್ಪ ಕಾಲಾವಕಾಶ ಕೇಳಿದ್ದಾರೆ ಮುಂದೆ ತೆಗೆದುಕೊಳ್ಳೋಣ.

ಲೋಕೋಪಯೋಗಿ ರಸ್ತೆಗಳ ದುರಸ್ತಿ

469 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ತುಗಳಿಂದ ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲ್ಪಟ್ಟ ರಸ್ತೆಗಳ ದುರಸ್ತಿ ಕಾರ್ಯ ತೀವ್ರವಾಗಿ ಆಲಕ್ಷಿಸಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರಸ್ತೆಗಳ ದುರಸ್ತಿ ಕಾರ್ಯಕ್ಕೆ ಎಷ್ಟು ಹಣ ನಿಗಧಿಯಾಗಿದೆ ಹಾಗೂ ಇದುವರೆಗೆ ಮಂಜೂರಾದ ಒಟ್ಟು ಹಣವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ಜಿಲ್ಲಾಪರಿಷತ್‌ಗಳಿಂದ ಲೋಕೋಪಯೋಗಿ ಇಲಾಖೆಗೆ ಇತ್ತೀಚೆಗೆ ವರ್ಗಾಯಿಸಲ್ಪಟ್ಟ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಜಿಲ್ಲೆ ಪರಿಷತ್ತಿನ ವ್ಯಾಪ್ತಿಯಿಂದ ವರ್ಗಾಯಿಸಲ್ಪಟ್ಟ 10000 ಕಿ.ಮೀ ರಸ್ತೆಗಳ ನಿರ್ವಹಣೆಗೆ ಪ್ರತಿವರ್ಷವೂ 13.20 ಕೋಟಿ ರೂ.ಗಳ ಅನುದಾನ ನಿಗಧಿಪಡಿಸಿದೆ. ಇದುವರೆವಿಗೂ ಅನುದಾನ ಬಿಡುಗಡೆ ಆಗಿರುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಮಂತ್ರಿಗಳ ಉತ್ತರ ಪ್ರಕಾರ ಪ್ರತಿ ಕಿ.ಮೀ.ಗೆ 13 ಸಾವಿರ ಎಂದು ಅನುದಾನ ಇಟ್ಟಿದ್ದೇವೆಂದು ಹೇಳಿದ್ದಾರೆ. ಅದನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಹಿಂದಿನ ಸರ್ಕಾರ ಈ ರಸ್ತೆಗಳಿಗಾಗಿ ಪ್ರತಿ ಕ್ಷೇತ್ರಕ್ಕೆ ನಲವತ್ತು ಲಕ್ಷ ರೂಪಾಯಿ ಬಿಡುಗಡೆ ಮಾಡುವುದಾಗಿ ಭರವಸೆ ಕೊಟ್ಟಿದ್ದರು ಅದಕ್ಕೆ ಸರ್ಕಾರ ಬದ್ಧವಾಗಿದೆಯೇ? ಬದ್ಧವಾಗಿದ್ದರೆ ಮಾರ್ಚ್ ಒಳಗೆ ಎಷ್ಟು ಹಣವನ್ನು ಅದಕ್ಕಾಗಿ ಬಿಡುಗಡೆ ಮಾಡುತ್ತೀರಿ?

ಶ್ರೀ ಕೆ.ಹೆಚ್ ರಂಗನಾಥ್ : 40 ಲಕ್ಷ ರೂ. ಕಾರ್ಯಕ್ರಮಕ್ಕೂ ಈ ಕಾರ್ಯಕ್ರಮಕ್ಕೂ ಸಂಬಂಧವಿಲ್ಲ. 1992ನೇ ಜನವರಿಯಲ್ಲಿ ಸರ್ಕಾರ ಪ್ರತಿ ಕ್ಷೇತ್ರದಲ್ಲಿ 50 ಕಿ.ಮೀ. ರಸ್ತೆಯನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯಿಂದ ಉತ್ತಮ ಪಡಿಸುವ ಒಂದು ತೀರ್ಮಾನ ಕೈಗೊಂಡಿದೆ. ಆ ಒಂದು ತೀರ್ಮಾನ ತೆಗೆದುಕೊಂಡ ನಂತರ ಸರ್ಕಾರಿ ಆಜ್ಞೆ ಆಗಿದೆ. ಆದರೆ ಹಣ ಇನ್ನೂ ಒದಗಿಸದೇ ಇದ್ದುದರಿಂದ ಅದನ್ನು ಕಾರ್ಯಗತ ಮಾಡಲು ಸಾಧ್ಯವಾಗಿಲ್ಲ. ಈಗ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಈ ಕೆಲಸವನ್ನು ಮಾಡಬೇಕು ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ತಮಗೆ ಗೊತ್ತಿರುವ ಹಾಗೆ 50 ಕಿ.ಮೀ. ಅಂದರೆ ಸುಮಾರು 10 ಸಾವಿರ ಕಿ.ಮೀ ರಸ್ತೆ ಆಗುತ್ತದೆ ಇದನ್ನು ತೀರ್ಮಾನ ಮಾಡುವಾಗ ಹತ್ತು ವರ್ಷಗಳಲ್ಲಿ ಮಾಡಬೇಕು ಎನ್ನುವ ಒಂದು ಅಭಿಪ್ರಾಯಕ್ಕೆ ಬರಲಾಯಿತು. ಈ ಹತ್ತು ಸಾವಿರ ಕಿ.ಮೀ. ರಸ್ತೆಯನ್ನು ನಾವು ಮೇಲ್‌ದರ್ಜೆಗೆ ಏರಿಸಲು ಹತ್ತು ವರ್ಷಗಳ ತನಕ ಕಾದುಕೊಂಡು ಕುಳಿತುಕೊಂಡರೆ ಈಗಿನ ಅಂದಾಜು ಪ್ರಕಾರ 150 ಕೋಟಿ ಎಂದು ವಿಚಾರ ಮಾಡಿದ್ದಾರೆ. ಅದು ಇನ್ನು ಹತ್ತು ವರ್ಷಕ್ಕೆ ಅಂದರೆ ಎರಡು ಪಟ್ಟು ಹೆಚ್ಚಾಗಬಹುದು. ನನ್ನ ವಿಚಾರ ಆದ್ದರಿಂದ ಅಷ್ಟು ದೂರ ಕಾಯತಕ್ಕದ್ದು ಸರಿಅಲ್ಲ. ಆ ಕಾಲವನ್ನು ಇನ್ನೂ ಕಡಿಮೆ ಮಾಡಬೇಕು,